ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್    ಕನ್ನಡಾನುವಾದ : ಕೆ.ಎಂ.ಹೆಗಡೆ ಮತ್ತು ಮಂಜುನಾಥ ಭಾಗವತ

## ಜೈ ಗುರುದೇವ

(ಸೆಪ್ಟೆಂಬರ್ ಸಂಚಿಕೆಯಿಂದ ಮುಂದುವರೆದುದು)

೨೧೧.ಗುರುದೇವ ಮಗುವಾಗಿ ತೋರಿದನು ಲೀಲೆ ।
ನರಲೋಕದೊಳಗದನು ತಿಳಿವವರು ಯಾರ್ರೈ ॥

೨೧೨.ವಿಸ್ಮಯವ ಪಡುವರೊಮ್ಮೊಮ್ಮೆ ಅಂಜುವರು ।
ತಕ್ಷಣವೆ ಕೊಂಡಾಡಿ ಮರೆಯುವರು ಕೆಲರು ॥

೨೧೩.ತಾಯಿ ತಂದೆಯರು ಮಾನವರದೇ ಬಗೆಯು ।
ಬಾಲಲೀಲೆಯ ಬಗೆಗೆ ಭಯವ ತಾಳುವರು ॥

೨೧೪.ಐದು ತಿಂಗಳ ಮಗುವ ಹಾಸುಗೆಯೊಳಿರಿಸಿ ।
ತಾ ದಿನದ ಮನೆವಾಳ್ತೆಯಲ್ಲಿ ಮನವನಿರಿಸಿ ॥

೨೧೫.ಚಂದ್ರಮಣಿ ಪಕ್ಕದಾ ಕೋಣೆಗೈದಿರಲು ।
ಬಂದು ಪುನರಪಿ ಮಗುವಿನೆಡೆಗೆ ನೋಡಿದಳು ॥

೨೧೬.ಪುರುಷನೋರ್ವನು ಹಾಸುಗೆಯ ಮೇಲೆ ಮಲಗಿರಲು ।
ಮರೆಯಾಗಿ ಸೊಳ್ಳೆಪರದೆಯ ಮುಸುಕು ಇರಲು ॥

೨೧೭.ಬೆರಗುಭಯಗಳು ಬೆರೆತು ಗಂಡನನು ಕರೆದು ।
ತ್ವರೆಯಿಂದ ಬನ್ನಿ ನೋಡಿರಿ ಪರಿಯನಿಂದು ॥

೨೧೮.ಮಲಗಿಸಿರ್ದೆನು ಶಿಶುವನೀ ಶಯ್ಯೆಯಲ್ಲಿ ।
ಬಲು ಪ್ರೌಢ ಮನುಜನೋರ್ವನು ತೋರ್ಪನಿಲ್ಲಿ ॥

೨೧೯.ಕಂದನನು ಯಾರೆತ್ತಿಕೊಂಡುಪೋಗಿಹರೊ ।
ಸಂದೇಹ ಮನಕೆ ಏಕಿಂತು ಘಟಿಸುವದೊ ॥

೨೨೦.ಭಯದಿಂದ ಬಂದು ಬ್ರಾಹ್ಮಣನು ನೋಡಿದನು ।
ಬಾಲಚೇಷ್ಟೆಯೊಳಾಡುತಿರುವ ಮಗುವನ್ನು ॥

೨೨೧.ಅಚ್ಚರಿಯೊಳಾ ಶಿಶುವ ತಾನೆತ್ತಿಕೊಂಡು ।
ಎದೆಹಾಲ ಕುಡಿಸುತಿರೆ ಚಂದ್ರಮಣಿ ನಿಂದು ॥

೨೨೨.ಭ್ರಮೆಗೊಂಡನೆಂದು ಕಾತರಿಸುತಿಹ ಸತಿಯ ।
ರಮಿಸಿ ಪೇಳಿದ ನಡೆದ ಬಲು ಚಮತ್ಕೃತಿಯ ॥

೨೨೩.ಮಗುವಿನಾ ಬದಲು ಪುರುಷೋತ್ತಮನ ಕಂಡು ।
ದಿಗಿಲಾಯ್ತೆ ನಿನಗೆ ಭೂತದ ಭ್ರಮೆಯು ಹಿಡಿದು ॥

೨೨೪.ನೀನಿಲ್ಲಿ ಕಂಡ ಬದಲಾವಣೆಯು ಸತ್ಯ ।
ಜ್ಞಾನಿಗಳು ಪೇಳುವರು ಈ ಜಗವೆ ಮಿಥ್ಯ ॥

೨೨೫.ಮನುಜ ಮಾತ್ರರಿಗಸಂಭಾವ್ಯವಹ ಘಟನೆ ।
ತೃಣಕೆ ಸಮ ದೇವನಿಗೆ ಇದು ಅಂಥ ನಟನೆ ॥

೨೨೬.ಕಾರಣಿಕನೇ ಲೀಲೆಯನ್ನು ತೋರಿದರೆ ।
ಕಾರಣವ ಹುಡುಕಿ ಚಿಂತಿಸಬಾರದರರೆ ॥

೨೨೭.ನೋಡಿ ನಲಿ ಪರರೊಳಿದನಾಡಬೇಡೆಂದು ।
ಮೂಡಿದಶ್ರುಗಳಿಂದಲಾ ಮಗುವ ಕಂಡು ॥

೨೨೮.ಮುಖವ ಮುದ್ದಾಡಿ ದೈವೀಕೃಪೆಯ ನೆನೆದು ।
ಸತಿಪತಿಗಳಿರಲು ಸಂತೋಷವನು ತಳೆದು ॥

೨೨೯.ಆರು ತಿಂಗಳು ಕಳೆಯೆ ಅನ್ನಪ್ರಾಶನವ ।
ಮಾಡಿಸಲು ಖುದಿರಾಮ ನಿಶ್ಚಯಿಸೆ ದಿನವ ॥

೨೩೦.ಶುಭದಿನದಿ ಸಂತರ್ಪಣೆ ಮಾಡ ಬಯಸಿ ।
ಆಮಂತ್ರಿಸಿದನಖಿಳ ಜನರನಾದರಿಸೆ ॥

೨೩೧.ಬಡವನೆಂದೆಣಿಸದೆಲೆ ಬಂದು ಬಹುಜನರು ।
ಬಡಿಸಿದಾ ಭೋಜ್ಯಗಳನುಂಡು ತೇಗಿದರು ॥

೨೩೨.ಬ್ರಾಹ್ಮಣರು ವೈಷ್ಣವರು ಭಿಕ್ಷುಕರು ಬರಲು ।
ಅಂಬಿಗರು ನೇಕಾರರೆಲ್ಲ ಸೇರಿದರು ॥

೨೩೩.ಊರಿನವರಲ್ಲದೇ ನೆರೆಯೂರಿನವರು ।
ಹಾರೈಸಿ ಬಂದುಂಡು ತೋಷ ತಾಳಿದರು ॥

೨೩೪.ರಘುವೀರ ಶರಣನಾ ಮನೆಯ ರಸದೂಟ ।
ಸೊಗಸೆನಿಸಿತೆಲ್ಲರಿಗೆ ಮನುಜರೊಕ್ಕೂಟ ॥

೨೩೫.ಜಾತಿಭೇದವ ಮರೆತು ಜನರನಾದರಿಸಿ ।
ಸತ್ಕರಿಸಿ ತಣಿಸಿದನು ಭೋಜನವ ಬಡಿಸಿ ॥

೨೩೬.ನವರತ್ನ ಕಾಂತಿಗೂ ಮಿಗಿಲಾಗಿ ಮೆರೆವ ।
ಚೆಲುವ ಮಗುವನು ನೋಡಿ ತಾಳಿದರು ಮುದವ ॥

೨೩೭.ತೇಜಸ್ವಿಯಾಬಾಲ ಕಂಡವರ ಹಸಿವ ।
ತಣಿಸಿ ತೃಪ್ತಿಯನಿತ್ತು ನಲಿಸಿದನು ಜನರ ॥

೨೩೮.ಕಾಂತಿಯುತ ದೇಹಕ್ಕೆ ಹೊಸಬಟ್ಟೆಯುಡುಗೆ ।
ಗಂಧ ಚಂದನ ತಿಲಕ ಹಣೆಗೆ ಬಹು ಶೋಭೆ ॥

೨೩೯.ಮುಖದಿ ಸುಳಿಯುತಲಿರುವ ಆ ಮಂದಹಾಸ ।
ಸಕಲರನು ತನ್ನೆಡೆಗೆ ಸೆಳೆವ ಶುಭನೋಟ ॥

೨೪೦.ತುಟಿಯನರಳಿಸಿ ನಗುವ ಸಂಭ್ರಮವ ಕಂಡು ।
ಚೆಲುವಿಗುರೆ ಹಿಗ್ಗಿದರು ಹಿಂಡಾಗಿ ನಿಂದು ॥

೨೪೧.ಈ ಮಗುವನೆಂತು ಸೃಷ್ಟಿಸಿದನೋ ಬ್ರಹ್ಮ ।
ಈ ಗುರುತ್ವಾಕರ್ಷಣೆಯ ಮೂಲ ಮರ್ಮ ॥

೨೪೨.ನಾವರಿಯೆವೀ ವಿಧಿಯ ವೈಚಿತ್ರ್ಯಗಳನು ।
ಕಾಮಾರಪುಕುರಕೇ ಕಳೆ ಬಂದುದಿನ್ನು ॥

೨೪೩.ಊಟ ನೋಟದಿ ತೃಪ್ತಿ ಹೊಂದಿ ತೆರಳಿದರು ।
ಅಂದಿನಾರೋಗಣೆಯ ಹೊಗಳಿ ಹಾಡಿದರು ॥

೨೪೪.ಕಾರಣಿಕ ಮಗುವಿನಾ ಮಹಿಮೆಯಿದು ಎನುತ ।
ಖುದಿರಾಮ ಶಶಿಮಣಿಯರರಿರಲು ಧ್ಯಾನಿಸುತ ॥